# ST. BARTHOLOMEAS A.S.B.SCHOOL, BELA

## ACADEMIC MASTER PLAN

## 2025 - 2026

Scanned with OKEN Scanner

# ಮುನ್ನುಡಿ

ಬೇಳ ಪರಿಸರದಲ್ಲಿ ಜ್ಞಾನಜ್ಯೋತಿಯನ್ನು ಬೆಳಗಿಸಿ ಜ್ಞಾನಸಂಪನ್ನ ಸಮಾಜವನ್ನು ರೂಪಿಸುವ ಸದುದ್ದೇಶದಿಂದ 1932ರಲ್ಲಿ ಸಿಸ್ಟರ್ಸ್ ಆಫ್ ಚ್ಯಾರಿಟಿ ಸಂಸ್ಥೆಯಿಂದ ಆರಂಭಗೊಂಡ ನಮ್ಮ ವಿದ್ಯಾಲಯವು ಶತಮಾನೋತ್ಸವದ ಹಾದಿಯಲ್ಲಿದೆ ಎಂದರೆ ತಪ್ಪಾಗಲಾರದು. ಸಾವಿರಾರು ಮಕ್ಕಳಿಗೆ ವಿದ್ಯಾದಾನವನ್ನು ಮಾಡಿ ಪ್ರಪಂಚದ ನಾನಾ ಕಡೆಗಳ್ಲಿ ಇವರು ವಿವಿಧ ಸ್ಥರಗಳಲ್ಲಿ ಇಂದು ಸೇವೆ ನೀಡುತ್ತಿದ್ದಾರೆ. ಅಲ್ಲದೆ ನೂರಾರು ಮಂದಿ ಊರಿನಲ್ಲಿಯೇ ವಿವಿಧ ಕ್ಷೇತ್ರಗಳಲ್ಲಿ ತೊಡಗಿಕೊಂಡು ಸಜ್ಜನ ಸಂಪನ್ನರಾಗಿ ಬಾಳನ್ನು ಸಾಗಿಸುತ್ತಿದ್ದಾರೆ. ಪ್ರಸ್ತುತ ನಮ್ಮೀ ವಿದ್ಯಾಲಯದಲ್ಲಿ 16 ಮಂದಿ ಶಿಕ್ಷಕ ಸಿಬ್ಬಂಧಿಗಳೂ, ಓರ್ವ ಶಿಕ್ಷಕೇತರ ಸಿಬ್ಬಂಧಿಯೂ ದುಡಿಯುತ್ತಿರುವಾಗ ಸಂಸ್ಥೆಯ ಮೇಲಧಿಕಾರಿಗಳೂ, ಭಗಿನಿ ಶ್ರೇಷ್ಠರೂ ತುಂಬು ಹೃದಯದಿಂದ ಸಹಕರಿಸುತ್ತಿದ್ದಾರೆ. ಪಾಠ್ಯ ಹಾಗೂ ಪಾಠ್ಯೇತರ ಚಟುವಟಿಕೆಗಳಲ್ಲಿ ನಮ್ಮ ವಿದ್ಯಾಲಯವು ಕಾಸರಗೋಡು ಜಿಲ್ಲೆಗೆ ಮಾದರಿ ಸಂಸ್ಥೆಯಾಗಿದೆ ಎಂದರೆ ಅಧಿಕವಾಗದು.

Scanned with OKEN Scanner

# ಉದ್ದೇಶಗಳು

ವಿದ್ಯಾರ್ಥಿಗಳ ಕಲಿಕಾಮಟ್ಟವನ್ನೂ, ಜ್ಞಾನಾಭಿವೃದ್ಧಿಯನ್ನೂ ನಿರೀಕ್ಷಿಸಿ ಈ ಕೆಳಗಿನ ಉದ್ದೇಶಗಳನ್ನು ಮಾಸ್ಟರ್ ಪ್ಲಾನ್‌ನಲ್ಲಿ ಒಳಪಡಿಸಲಾಗಿದೆ.

- ತ್ರಿಭಾಷಾ ಸೂತ್ರಕ್ಕನುಗುಣವಾಗಿ ಮಾತೃಭಾಷೆ, ದೇಶಭಾಷೆ, ವಿಶ್ವಭಾಷೆಯ ಕಲಿಕೆಯಲ್ಲಿ ಪರಿಣತಿಯನ್ನು ಸಾಧಿಸುವುದು, ಸೃಜನಶೀಲತೆಯನ್ನು ಪ್ರೇರೇಪಿಸುವುದು.
- ವ್ಯವಹಾರಜ್ಞಾನ, ಗಣಿತದ ಕಲಿಕೆಯಲ್ಲಿ ವಿದ್ಯಾರ್ಥಿಗಳು ತಮ್ಮ ತಮ್ಮ ಬುದ್ಧಿಮತ್ತೆಯ ಸಾಮರ್ಥ್ಯಕ್ಕನುಗುಣವಾಗಿ ಚಟುವಟಿಕೆಗಳನ್ನು ನಡೆಸಿ ಸಮಸ್ಯೆ ಪರಿಹಾರಕ್ಕೆ ಸಹಾಯಕವಾಗುವ ಚಿಂತನೆಯನ್ನು ಬೆಳೆಸುವುದು.
- ಪೌರಪ್ರಜ್ಞೆಯನ್ನು ಬೆಳೆಸುವಲ್ಲಿ ಸಹಕರಿಸುವ ಚಟುವಟಿಕೆಗಳನ್ನು ನಡೆಸುವುದರ ಮೂಲಕ ದೇಶದ ಐಕ್ಯತೆ, ಸಹಿಷ್ಣುತೆ ಪ್ರಜಾಪ್ರಭುತ್ವ ಹಾಗೂ ಸಾಂಸ್ಕೃತಿಕ ಪರಂಪರೆ ಇತಿಹಾಸವನ್ನು ಗೌರವಿಸುವ ಮನೋಧರ್ಮವನ್ನು ಬೆಳೆಸುವುದು.
- ವೈಜ್ಞಾನಿಕ ಮನೋಧರ್ಮವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ನಿಟ್ಟಿನಲ್ಲಿ ಚಟುವಟಿಕೆಗಳನ್ನು ನಡೆಸುವುದು. ಆ ಮೂಲಕ ಮೂಢನಂಬಿಕೆ ಅಪ್ರಸ್ತುತತೆಯ ಅರಿವು, ದೈನಂದಿನ ಬದುಕಿನಲ್ಲಿ ವಿಜ್ಞಾನದ ತಿಳುವಳಿಕೆಗೊಂಡು, ಚಿಂತನೆಯನ್ನು ಬೆಳೆಸುವುದು.
- ಶಾರೀರಿಕವಾಗಿಯೂ, ಮಾನಸಿಕವಾಗಿಯೂ, ಬೌದ್ಧಿಕವಾಗಿಯೂ ಆರೋಗ್ಯವುಳ್ಳ ಸಮಜವೊಂದರ ನಿರ್ಮಾಣಕ್ಕೆ ಅನುಯೋಜ್ಯವಾದ ಕ್ರೀಡಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಕ್ರೀಡಾ ಮನೋಭಾವವನ್ನು ರೂಪಿಸುವುದು.
- ವಿದ್ಯಾರ್ಥಿಗಳಲ್ಲಿ ಸುಪ್ತವಾಗಿರು ಪ್ರತಿಭೆಗಳನ್ನು ಗುರುತಿಸಿ ಅದರ ಅನಾವರಣಕ್ಕೆ ಸೂಕ್ತ ಚಟುವಟಿಕೆಗಳನ್ನು ರೂಪಿಸುವುದು. ಹಾಗೂ ಪ್ರತಿಭಾ ಪ್ರದರ್ಶನಕ್ಕೆ ಅವಕಾಶವನ್ನು ನೀಡುವುದು.
- ಪ್ರತಿ ಮಗುವು ಕಡಿಮೆಯಿಂದರೆ ಮೂರು ಭಾಷೆಗಳಲ್ಲಾದರೂ ಆಶಯ ವಿನಿಮಯ ಮಾಡುವುದು.
- ಆರೋಗ್ಯದಾಯಕ ವಾತಾವರಣ ಸೃಷ್ಟಿಸುವುದು.
- ಶಾಲಾ ಪ್ರಯೋಗಾಲಯ ಮತ್ತು ಲೈಬ್ರರಿಯನ್ನು ನವೀಕರಿಸುವುದು.
- ಶಾಲಾ ಮಕ್ಕಳಿಗೆ ಕೌನ್ಸಿಲಿಂಗ್ ಸೌಕರ್ಯವನ್ನು ಒದಗಿಸುವುದು.
- ಮಕ್ಕಳ ಸಾಮರ್ಥ್ಯವು ಕೇವಲ ವಿಷಯ ಕಲಿಕೆಯಲ್ಲಿ ಮಾತ್ರ ಕೇಂದ್ರೀಕರಿಸದೆ ಸೃಜನಶೀಲ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವ ರೀತಿಯಲ್ಲಿ ಸಮಗ್ರವಾದ ವಿಕಾಸವನ್ನು ಲಕ್ಷ್ಯದಲ್ಲಿಟ್ಟು ನಿಜವಾದ ಶೈಕ್ಷಣಿಕ ಉದ್ದೇಶಗಳನ್ನು ಗಳಿಸಲಾಗಿದೆಯೇ ಎಂದು ನೋಡುವುದು.
- ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತಾವೇ ತೊಡಗಿಸುಕೊಳ್ಳುವಂತೆ ಮಕ್ಕಳಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸಲು ಅವಕಾಶ ಕಲ್ಪಿಸುವುದು.

Scanned with OKEN Scanner

# ಈ ವರ್ಷ ತರಗತಿಯಲ್ಲಿ ನಡೆಸುವ ಚಟುವಟಿಕೆಗಳ ವಿವರಗಳು – L.P.

| ಕ್ರಮ ಸಂಖ್ಯೆ | ಚಟುವಟಿಕೆಗಳು | ಹಂತಗಳು | ಸಮಯ | ಹೊಣೆಗಾರಿಕೆ | ಹಣಕಾಸು |
|---|---|---|---|---|---|
| | | **ಕನ್ನಡ** | | | |
| 1. | ಕನ್ನಡ ಕಾವ್ಯೋತ್ಸವ | • ಕನ್ನಡ ಕಲಿಕೆಯಲ್ಲಿರುವ ಪದ್ಯಗಳನ್ನು ಹಾಡಿಸುವುದು.<br>• ಉಪಕರಣಗ ಸಹಾಯದೊಂದಿಗೆ ಪದ್ಯಗಳನ್ನು ರಾಗ, ತಾಳ, ಲಯಬದ್ಧವಾಗಿ ಹಾಡಿಸುವುದು.<br>• ಹಾಡುಗಳನ್ನು ಬಾಯ್ದೆರೆಯಾಗಿ ಹಾಡಲು ಅವಕಾಶ ನೀಡುವುದು | ಜೂನ್ ಜುಲಾಯಿ | ಅಧ್ಯಾಪಕರು | P.T.A |
| 2. | ಸಂಯುಕ್ತ ಡೈರಿ/ ಸೃಜನಾತ್ಮಕ ಡೈರಿ | • ಪ್ರತಿದಿನ ಕಂಡುಕೊಂಡಂತಹ ಘಟನೆಗಳನ್ನು ದಿನಚರಿಯ ಮೂಲಕ ವ್ಯಕ್ತಪಡಿಸುವುದು.<br>• ಭಾಷಾ ಕಲಿಕೆಯಲ್ಲಿ ಆಶಯಗ್ರಹಣ ವ್ಯಕ್ತಪಡಿಸುವಿಕೆ, ಬರೆಯುವಿಕೆ ಮೊದಲಾದವುಗಳನ್ನು ಪರಿಚಯಿಸಿ ಮಕ್ಕಳು ಸ್ವತಂತ್ರವಾಗಿ ಆಶಯಗ್ರಹಣ ಮಾಡುವುದಕ್ಕೂ, ಪ್ರಕಟಪಡಿಸುವುದಕ್ಕೂ ಸಂದರ್ಭ ನೀಡುವುದು. | ಜೂನ್ – ಮಾರ್ಚ್ | ಅಧ್ಯಾಪಕರು ಹೆತ್ತವರು | |
| 3. | ರೀಡರ್ಸ್ ಥಿಯೇಟರ್ | • ಪಾಠಭಾಗ ಹಾಗೂ ಲೈಬ್ರರಿ ಪುಸ್ತಕದಲ್ಲಿರುವ ಕಥೆ, ಸಂಭಾಷಣೆ ಎಂಬಿವುಗಳ ಮಂಡನೆ, ಕಿರುನಾಟಕ ಪ್ರದರ್ಶನ | ಜೂನ್ – ಮಾರ್ಚ್ | ಅಧ್ಯಾಪಕರು | |
| 4. | ಅಕ್ಷರ ತಪ್ಪಿಲ್ಲದೆ ಬರವಣಿಗೆಯನ್ನು ಪ್ರೋತ್ಸಾಹಿಸುವುದು. | • ಒತ್ತಕ್ಷರಗಳ ಕಾರ್ಡು ತಯಾರಿ.<br>• ಒತ್ತಕ್ಷರಗಳನ್ನು ಚಾರ್ಟ್‌ನಲ್ಲಿ ಬರೆದು ಅದರ ಹಿಂಭಾಗದಲ್ಲಿ ಅವು ಒಳಗೊಂಡ ಪದಗಳನ್ನು ಬರೆದು ಪರಿಚಯಿಸುವುದು. | ಜೂನ್ – ಮಾರ್ಚ್ | ಅಧ್ಯಾಪಕರು | |
| | | **ಪರಿಸರ** | | | |
| 1. | ನಿರೀಕ್ಷಣೆ ಹಾಗೂ ಜ್ಞಾನ ನಿರ್ಮಾಣ | • ಪಾಠಭಾಗಕ್ಕೆ ಸಂಬಂಧಿಸಿ ಅನುಯೋಜ್ಯವಾದ ಸಮಯಗಳಲ್ಲಿ ಬಯಲು ಪ್ರವಾಸ ಕೈಗೊಳ್ಳುವುದು.<br>• ನುರಿತರೊಂದಿಗೆ ಸಂದರ್ಶನ. | ಜೂನ್ – ಮಾರ್ಚ್ | ಅಧ್ಯಾಪಕರು | P.T.A |

Scanned with OKEN Scanner

| ಕ್ರಮ ಸಂಖ್ಯೆ | ಚಟುವಟಿಕೆಗಳು | ಹಂತಗಳು | ಸಮಯ | ಹೊಣೆಗಾರಿಕೆ | ಹಣಕಾಸು |
|---|---|---|---|---|---|
| 2. | ಲಘು ಪ್ರಯೋಗ | • ಪರಿಸರ ಅಧ್ಯಯನ ಕಲಿಕೆಗೆ ಅಗತ್ಯವಾದ ಉಪಕರಣಗಳ ತಯಾರಿ ಹಾಗೂ ಪ್ರಯೋಗಗಳನ್ನು ಆಯೋಜಿಸುವುದು.<br>• ಸರಳ ಪ್ರಯೋಗಗಳನ್ನು ಮಾಡುವುದರ ಮೂಲಕ ವೈಜ್ಞಾನಿಕ ತತ್ವಗಳನ್ನು ತಿಳಿದುಕೊಳ್ಳುವುದು.<br>• ಪ್ರಯೋಗದ ಟಿಪ್ಪಣಿ ಬರೆಯುವುದು. | ಜೂನ್ – ಮಾರ್ಚ್ | ಅಧ್ಯಾಪಕರು | P.T.A |
| | | **ಗಣಿತ** | | | |
| 1. | ಕಲಿಕೋಪಕರಣಗಳಿಂದ ಗಣಿತ ಕಲಿಕೆಯನ್ನು ರಸವತ್ತಾಗಿಸುವುದು. | • ಪಾಠಭಾಗಕ್ಕೆ ಸಂಬಂಧಿಸಿದ ಕಲಿಕೋಪಕರಣಗಳ ನಿರ್ಮಾಣ ಹಾಗೂ ಪ್ರದರ್ಶನ | ಜುಲಾಯಿ – ಮಾರ್ಚ್ | ಅಧ್ಯಾಪಕರು | P.T.A |
| | | **ENGLISH** | | | |
| 1. | English Assembly | • Conducting varies activities in English prayer, Pledge and Class room activities | June - March | ಅಧ್ಯಾಪಕರು | |
| 2. | Readers Theatre | • Reading convesation with voice modulation. | June - March | ಅಧ್ಯಾಪಕರು | |
| 3. | Spoken English Classes | • By using ICT giving chances to listen.<br>• Familiarise with phatic communication expression such as Hi, Hello, Good morning.<br>• Giving importance to talking English in the English classes. | June - March | ಅಧ್ಯಾಪಕರು | |
| | | **ವೃತ್ತಿ ಪರಿಚಯ** | | | |
| 1. | ಕಸದಿಂದ ರಸ | • ಉಪಯೋಗಶೂನ್ಯ ವಸ್ತುಗಳಿಂದ ಕಲಿಕೋಪಕರಣಗಳ ತಯಾರಿ. | ಜೂನ್ – ಮಾರ್ಚ್ | ಅಧ್ಯಾಪಕರು ಹೆತ್ತವರು | P.T.A |

Scanned with OKEN Scanner

# ಈ ವರ್ಷ ತರಗತಿಯಲ್ಲಿ ನಡೆಸುವ ಚಟುವಟಿಕೆಗಳ ವಿವರಗಳು – U.P.

| ಕ್ರಮ ಸಂಖ್ಯೆ | ವಿಷಯ | ಚಟುವಟಿಕೆ | ಹಂತಗಳು | ಸಮಯ | ಹೊಣೆಗಾರಿಕೆ | ಹಣಕಾಸು |
|---|---|---|---|---|---|---|
| 1. | Kannada | •ಪ್ರತಿಯೊಬ್ಬರಲ್ಲೂ ಸ್ವಂತಹ ವಾಕ್ಯ ರಚನೆ ಮಾಡಿಸುವುದು<br>•ಕಥೆ, ಕವಿತೆಯನ್ನು ಬರೆಸುವುದು. ಸೃಜನಾತ್ಮಕತೆ<br>•ಸೃಜನಶೀಲ ಚಟುವಟಿಕೆಯಲ್ಲಿ ತೊಡಗಿಸುವುದು | • ಕೆಲವೊಂದು ಪದಗಳನ್ನು ನೀಡುವುದು.<br>• ಪದಗಳನ್ನು ಜೊತೆಗೂಡಿಸಿ ವಾಕ್ಯ ರಚಿಸುವುದು.<br>• ಸ್ಪರ್ಧೆಗಳನ್ನು ಹಮ್ಮಿಕೊಳ್ಳುವುದು. | June-Feb | •ತರಗತಿ ಅಧ್ಯಾಪಕರು<br>•ವಿದ್ಯಾರಂಗ ಕ್ಲಬ್ ಸದಸ್ಯರು | PTA |
| 2. | English | •Story, Poem writing.<br>•Conversation<br>•Diary | • ಕೆಲವೊಂದು ಶೀರ್ಷಿಕೆಯನ್ನು ಸನ್ನಿವೇಶಗಳನ್ನು ನೀಡುವುದು.<br>• ವಾಕ್ಯ ರಚಿಸುವುದು. | June-Feb | •ತರಗತಿ ಅಧ್ಯಾಪಕರು | PTA |
| 3. | Hindi | •ಅಕ್ಷರಗಳಿಂದ ಪದಗಳನ್ನು ಬರೆಯಿಸುವುದು.<br>•ಓದುವಿಕೆಯನ್ನು ಉತ್ತಮಗೊಳಿಸುವುದು.<br>•ಬರವಣಿಗೆ ಹಾಗೂ ಓದುವಿಕೆಗೆ ಪ್ರಾಮುಖ್ಯತೆ ನೀಡುವುದು. | • ಚಿತ್ರಗಳಿಂದ ಪದಗಳನ್ನು ಬರೆಯಿಸಿ, ವಾಕ್ಯಗಳನ್ನು ರಚಿಸುವುದು.<br>• ಪದಬಂಧ ಹಾಗೂ ವಿವರಣೆಗಳನ್ನು ಬರೆಯಿಸುವುದು. | June-Feb | •ಹಿಂದಿ ಅಧ್ಯಾಪಕರು | PTA |
| 4. | Sanskrit | •Reading competition.<br>•Sentence making.<br>•ನಿತ್ಯೋಪಯೋಗಿ ವಸ್ತುಗಳ ಹೆಸರು ತಿಳಿಯುವುದು. | • ಕಥೆ ಪುಸ್ತಕಗಳನ್ನು ಓದಿಸುವುದು.<br>• ನಾಮಪದ, ಕ್ರಿಯಾಪದಗಳ ಚಾರ್ಟನ್ನು ಬಳಸಿ ವಾಕ್ಯರಚನೆ.<br>• ವಸ್ತುಗಳನ್ನು, ಅದರ ಹೆಸರನ್ನು ಬರೆದು ಪ್ರದರ್ಶಿಸುವುದು. | June-Feb | •ಸಂಸ್ಕೃತ ಅಧ್ಯಾಪಕರು | PTA |

Scanned with OKEN Scanner

| ಕ್ರಮ ಸಂಖ್ಯೆ | ವಿಷಯ | ಚಟುವಟಿಕೆ | ಹಂತಗಳು | ಸಮಯ | ಹೊಣೆಗಾರಿಕೆ | ಹಣಕಾಸು |
|---|---|---|---|---|---|---|
| 5. | Science | •ರಸಪ್ರಶ್ನೆ<br>•Science model.<br>•Simple experiments. | • ತರಗತಿಗಳಲ್ಲಿ ಕ್ವಿಜ್ ನಡೆಸುವುದು.<br>• ಪಾಠಗಳಿಗೆ ಸಂಬಂಧಿಸಿ Home Labನಲ್ಲಿರುವ ವಸ್ತುಗಳನ್ನು ಉಪಯೋಗಿಸಿ ಮಾದರಿ ತಯಾರಿ<br>• ಪ್ರಯೋಗಗಳನ್ನು ಮಾಡುವುದು. | June-Feb | •Science Teacher<br>•Club incharge. | PTA |
| 6. | Social | •Map reading | • ಸ್ಥಳೀಯ ಭೂಪಟ, ಪ್ರಾಂತ್ಯ ಭೂಪಟ, ರಾಷ್ಟ್ರ ಭೂಪಟ, ಅಂತರಾಷ್ಟ್ರೀಯ ಭೂಪಟ ಓದುವುದು.<br>• Quiz Competition. | June-Feb | •Class Teacher<br>•Club incharge. | PTA |
| 7. | Maths | •Maths Quiz<br>•Model | • ತಿಂಗಳಿಗೊಂದು ತರಗತಿಯಲ್ಲಿ ಗಣಿತ ಕ್ವಿಜ್ ನಡೆಸುವುದು | June-Feb | •Class Teacher<br>•Club incharge. | PTA |
| 7. | Work Experience | •ಕರಕುಶಲ ವಸ್ತುಗಳ ನಿರ್ಮಾಣ | • ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ<br>• ಕಸದಿಂದ ರಸ ಎಂಬ ಉದ್ದೇಶವನ್ನಿಟ್ಟುಕೊಂಡು ವಸ್ತುಗಳ ನಿರ್ಮಾಣ. | June-Feb | •Class Teacher | PTA |
| 8. | Art | •ಚಿತ್ರ ರಚನೆ | • ಚಿತ್ರಗಾರರನ್ನು ಕರೆದು ತರಬೇತಿ ನೀಡುವುದು. | June-Feb | •Class Teacher | PTA |
| 9. | Physical education | •ಶಾಲಾ ಮಟ್ಟದಲ್ಲಿ ಆಯ್ಕೆ | • ಕೊಕ್ಕೋ, ಕಬಡ್ಡಿ, Chess, Shettle ತಂಡಗಳಿಗೆ ವಿದ್ಯಾರ್ಥಿಗಳ ಆಯ್ಕೆ. ಜುಲೈ 15ಕ್ಕೆ ಶಾಲಾ ತಂಡಗಳ ರಚನೆ. | June-July | •Sport incharge Teacher/ HM | PTA |
| | | •ಶಾಲಾ ತಂಡಕ್ಕೆ ತರಬೇತಿ | • ಆಗಸ್ಟ್ – ಸೆಪ್ಟಂಬರ್ ತಿಂಗಳಲ್ಲಿ PT ಅಧ್ಯಾಪಕರಿಂದ ಶಾಲಾ ತಂಡಕ್ಕೆ ಪ್ರತ್ಯೇಕ ತರಬೇತಿ | August-Sept. | | |
| | | •ಆಟದ ಕೋರ್ಟ್ ನಿರ್ಮಾಣ | • PTA ಸಹಕಾರದೊಂದಿಗೆ ಆಟದ ತರಬೇತಿಗೆ ಕೋರ್ಟ್ ಸಿದ್ಧತೆ | August-Oct | | |

Scanned with OKEN Scanner

| ಕ್ರಮ ಸಂಖ್ಯೆ | ವಿಷಯ | ಚಟುವಟಿಕೆ | ಹಂತಗಳು | ಸಮಯ | ಹೊಣೆಗಾರಿಕೆ | ಹಣಕಾಸು |
|---|---|---|---|---|---|---|
| | | Shuttle Badminton | ಶಾಲೆಯ ಎಲ್ಲಾ ಮಕ್ಕಳಿಗೆ Shuttle Badminton ಆಟ ಆಡಲು ಅವಕಾಶ ನೀಡುವುದು.<br>ಪ್ರತಿದಿನ ತರಗತಿಗಳಲ್ಲಿ ಗುಂಪುಗಳಾಗಿ ಮಾಡಿ ಆಟ ಆಡಲು ತರಬೇತಿ ನೀಡುವುದು<br>Mass Drill, Aerobic Dance ಗಳನ್ನು ಮಾಡಿಸುವುದು | June -Feb | Sports incharge teacher and HM | PTA |
| | | ಉಪಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗಿ | ಪ್ರತ್ಯೇಕ ತರಬೇತಿಯೊಂದಿಗೆ ಉಪಜಿಲ್ಲಾ /ಜಿಲ್ಲಾಮಟ್ಟದ ಸ್ಪರ್ಧೆಯಲ್ಲಿ ಭಾಗಿ | | | |
| 10 | ಶಿಸ್ತು | ಆಸಕ್ತಿದಾಯಕ ವಿಷಯಗಳಲ್ಲಿ ಭಾಗಿಯಾಗುವುದು<br>ಓದುಗಾರಿಕೆ, ಚಿತ್ರರಚನೆ, ಪ್ರಯೋಗ | ಬೆಳಗ್ಗೆ 9.30 ರಿಂದ 9.45 ಮಧ್ಯಾಹ್ನ 1.15 ರಿಂದ 1.45 ವರೆಗೆ ಈ ಸಮಯದಲ್ಲಿ ಮಕ್ಕಳು ವಿವಿಧ ಚಟುವಟಿಕೆಗಳಲ್ಲಿ ನಿರತರಾಗುವುದು. | June -March | Class teachers, Language teachers, HM | PTA |
| | | | ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಓದಲು, ಬರೆಯಲು ಹೆಚ್ಚಿನ ಚಟುವಟಿಕೆಗಳನ್ನು ನೀಡುವುದು.<br>ವೈಯುಕ್ತಿಕ ಗಮನ ನೀಡುವುದು | | | |

Scanned with OKEN Scanner

# ಉಪಸಂಹಾರ

ನಮ್ಮೀ ವಿದ್ಯಾಮಂದಿರದ ಸರ್ವತೋಮುಖವಾದ ಪ್ರಗತಿಯನ್ನು ಮನದಲ್ಲಿಟ್ಟುಕೊಂಡು ಈ ಮಾಸ್ಟರ್ ಪ್ಲಾನ್ ನ್ನು ಸಿದ್ಧಪಡಿಸಲಾಗಿದ್ದು 2025 - 2026 ನೇ ಶೈಕ್ಷಣಿಕ ವರ್ಷದಲ್ಲಿ ಕಾರ್ಯಗತಗೊಳಿಸುವ ಉದ್ದೇಶವಿರಿಸಲಾಗಿದೆ. ಈ ಯೋಜನೆಯ ಯಶಸ್ವಿಗೆ ಶಾಲಾ ಶಿಕ್ಷಕ ರಕ್ಷಕ ಸಂಘ, ಮಾತೃಮಂಡಳಿ ಹಾಗೂ ಊರ ಸಂಘಟನೆಗಳ ಸಹಕಾರವನ್ನು ಅಪೇಕ್ಷಿಸುತ್ತಿದ್ದೇವೆ. ವಿದ್ಯಾರ್ಥಿಗಳ ಉಜ್ವಲ ಭವಿಷ್ಯವೇ ಈ ಎಲ್ಲಾ ಚಟುವಟಿಕೆಗಳ ಮೂಲ ಮಂತ್ರವಾಗಿದೆ. ಈ ವಾರ್ಷಿಕ ಶೈಕ್ಷಣಿಕ ಯೋಜನೆಯ ಯಶಸ್ಸಿಗೆ ಸಜ್ಜನರಾದ ಎಲ್ಲಾ ಬಾಂಧವರ ಸಹಕಾರವನ್ನು ಅಪೇಕ್ಷಿಸುತ್ತಿದ್ದೇವೆ.

Scanned with OKEN Scanner